ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Thursday, 6th September 1973 Bhadrapada 15, 1895-S. E.

The House met in the Assembly Chamber, Vidhana Soudha, at Twelve of the Clock.

MADAM SPEAKER : (*Smt. K.S. Nagarathnamma*) in the Chair.

STARRED QUESTIONS

(to which oral answers were given)

PAYMENT OF SALARIES TO THE STAFF OF I GRADE COLLEGES

39. SRI S. KARIAPPA (Kanakapura).—

Will the Minister for Education be pleased to state :—

(*a*) whether the Government is aware that some 1st grade colleges started in the State about a decade ago, some times have not paid salaries to the staff continuously for four or five months;

(*b*) if so, the names of such colleges and the reasons for the same; the steps taken by Government to ensure that the salaries of the staff are paid regularly?

SRI A. R. BADARINARAYANA : (Minister for Education)

(*a*) Yes

(*b*) Names of such colleges are :—

(1) M.D.T.D.B. Arts and Science College, Mysore.

(2) Shanthi College, Malavalli.

(3) Municipal I Grade College, Chinthamani.

(4) J. S. S. Shanthikumar Gubbi Science College, Dharwar.

The reasons for non-disbursement of salary in time are generally financial difficulties of the college concerned. The Director of Collegiate Education has issued suitable instructions to the above Colleges for immediate disbursement of salaries.

ಶ್ರೀ ಎಚ್. ಪುಟ್ಟದಾನ್ :— ಸಿಬ್ಬಂದಿಯವರಿಗೆ ಸಂಬಳವನ್ನು ಕ್ರಮವಾಗಿ ಪಾವತಿ ಮಾಡಬೇಕೆಂಬ ಬಗ್ಗೆ ಅವರಿಗೆ ಸರ್ಕಾರದವರು ಏನು ತಿಳುವಳಿಕೆ ಕೊಟ್ಟಿದ್ದಾರೆ ?

ಶ್ರೀ ಎ. ಆರ್. ಬದ್ರಿನಾರಾಯಣ್ :— ಕೆಲವರು ಇದಕ್ಕೆಲ್ಲಾ ಸೂಕ್ತ ಏರ್ಪಾಡುಗಳನ್ನು ಮಾಡಿಕೊಂಡಿದ್ದಾರೆ ಅಂದರೆ ಜಮೀನು ವಗೈರೆಗಳನ್ನು ಮಾಡಿಕೊಂಡಿದ್ದಾರೆ. ಆದರೆ ಇನ್ನು ಕೆಲವರು ಏನೂ ಮಾಡಿಕೊಂಡಿಲ್ಲ. ಹಳೇ ಕಾಲೇಜುಗಳು ಬಹಳ ಚೆನ್ನಾಗಿ ಕೆಲಸ ನಡೆಸಿಕೊಂಡು ಬರುತ್ತಿವೆ. ಆದರೆ ಹೊಸ ಕಾಲೇಜುಗಳೇ ಇನ್ನೂ ಅಂಥ ಫರ್ಮ್‌ಪುಟಿಂಗ್ ಮೇಲೆ ನಿಂತಿಲ್ಲ.

ಶ್ರೀ ಎಚ್. ಪುಟ್ಟದಾನ್ .—ತಾವು ಅಪ್ಪಣೆ ಕೊಡಿಸಿದಂತೆ ಯಾವ ಕಾಲೇಜಿಗೆ ಜಮೀನು ವಗೈರೆಗಳಿರುವುದಿಲ್ಲ ಅಂಥ ಕಾಲೇಜುಗಳನ್ನು ಸರ್ಕಾರವೇ ವಹಿಸಿಕೊಳ್ಳುವುದಕ್ಕೆ ಏನಾದರೂ ಆಲೋಚನೆಗಳನ್ನು ಮಾಡಿದ್ದಾರೆಯೇ ?

ಶ್ರೀ ಎ. ಆರ್. ಬದ್ರಿನಾರಾಯಣ್ :— ಇದು ಬಹಳ ದೊಡ್ಡ ಪ್ರಶ್ನೆ. ವಿದ್ಯಾ ಇಲಾಖೆ ಬಹಳ ದೊಡ್ಡದಾಗಿ ಬೆಳೆಯುತ್ತಿದೆ. ಪ್ರಾಥಮಿಕ ಶಿಕ್ಷಣದ ಬಗ್ಗೆ ಸರ್ಕಾರ ಬಹಳ ಕೆಲಸ ಮಾಡಬೇಕಾಗಿದೆ. ರಾಜ್ಯದಲ್ಲಿ ಇನ್ನು ಶೇಕಡ 69 ರಷ್ಟು

ಮಕ್ಕಳನ್ನು ಅಕ್ಷರಸ್ಥರನ್ನಾಗಿ ಮಾಡಬೇಕಾದ ಹೊಣೆಗಾರಿಕೆ ಸರ್ಕಾರದ ಮೇಲಿದೆ. ಅದುದರಿಂದ ಈ ಕಾಲೇಜುಗಳನ್ನು ಸರ್ಕಾರ ವಹಿಸಿಕೊಳ್ಳಕ್ಕೆ ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಎಚ್. ಪುಟ್ಟದಾಸ್ :— ಸಂಬಳವಿಲ್ಲದೆ ಉಪಾಧ್ಯಾಯರುಗಳು ಹೇಗೆ ಕೆಲಸ ಮಾಡುತ್ತಾರೆ?

ಶ್ರೀ ಎ. ಆರ್. ಬದ್ರಿನಾರಾಯಣ್ :— ಸಂಬಳ ಕೊಡಕ್ಕೆ ಶಕ್ತಿ ಇದ್ದರೆ ಅವರು ಆ ಕಾಲೇಜುಗಳನ್ನು ನಡೆಸಬೇಕು, ಅವರು ಅವುಗಳನ್ನು ಮುಚ್ಚಬೇಕು.

ಶ್ರೀ ಜಿ. ರಾಮೇಗೌಡ :— ಸರ್ಕಾರದಿಂದ ಬರಕ್ಕೆ ಗ್ರಾಂಟನ್ನು ಕ್ರಮವಾಗಿ ಕಳೆದ 10 ವರ್ಷಗಳಿಂದಲೂ ಪಡೆದುಕೊಂಡು ಈಗ ಅವರು ಕೊಡಬೇಕಾದ್ದನ್ನು ಕೊಡದೆ ಇರುವುದರಿಂದ ಈಗ ಈ ತೊಂದರೆ ಉಂಟಾಗಿದೆಯೆಂದು ಉಪಾಧ್ಯಾಯರುಗಳು ಯಾರಾದರೂ ತಿಳಿಸಿದ್ದಾರೆಯೆ?

ಶ್ರೀ ಎ. ಆರ್. ಬದ್ರಿನಾರಾಯಣ್ :—ತಿಳಿಸಿದ್ದಾರೆ. ಆದಾಗ್ಯೂ ಸರ್ಕಾರದವರು ಏನೂ ಮಾಡುವುದಕ್ಕಾಗುವುದಿಲ್ಲ ಆದರೆ ಇತ್ತೀಚೆಗೆ ಸರ್ಕಾರದವರು ತಾಕೀತ್ ಮಾಡಿದ ಮೇಲೆ ಅವರು ಅವರ ಭಾಗದ ಹಣವನ್ನು ಪಾವತಿ ಮಾಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ :— ಬೀರೂರಿನಲ್ಲಿ ಒಂದು ಕಾಲೇಜಿದೆ. ಸರ್ಕಾರದವರು ಎರಡು ಮೂರುಸಾರಿ ತಾಕೀತನ್ನು ಕೊಟ್ಟಾಗ್ಗೂ ಅವರು ಇನ್ನೂ ಸರಿಪಡಿಸಿಕೊಂಡಿಲ್ಲ. ಅಲ್ಲಿ ಈ ತೊಂದರೆ ಇನ್ನೂ ಇದ್ದೇ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಆರ್. ಬದ್ರಿನಾರಾಯಣ್ :— ನನ್ನ ಗಮನಕ್ಕೆ ಬಂದಿಲ್ಲ. ವಿಚಾರ ಮಾಡಿ ಆ ಬಗ್ಗೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ :— ಸರ್ಕಾರದವರು ಈ ಕಾಲೇಜುಗಳಿಗೆ ಮನ್ನಣೆ ಕೊಡುವಾಗ ಅವರಿಂದ ಹಣವನ್ನು ಠೇವಣಿ ಮಾಡಿಸಿಕೊಂಡಿರುತ್ತಾರೆ. ಈ ಕಾಲೇಜಿನವರು ಎಂದು ಸಿಬ್ಬಂದಿ ವರ್ಗಕ್ಕೆ ಸಂಬಳವನ್ನು ಪಾವತಿ ಮಾಡುವುದಿಲ್ಲವೋ ಅಂದು ಅವರಿಗೆ ಈ ಠೇವಣಿ ಹಣದಲ್ಲಿ ಸಂಬಳವನ್ನು ಪಾವತಿ ಮಾಡಿ ಹಣ ಖರ್ಚು ಹಾಕುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎ. ಆರ್. ಬದರಿನಾರಾಯಣ್ :— ಇದೊಂದು ಬಹಳ ಉತ್ತಮವಾದ ಸಲಹೆ. ಆದರೆ ಕೆಲವು ಸಂದರ್ಭಗಳಲ್ಲಿ ಸಡಲಿಕೆ ತೋರಿಸಿರುತ್ತದೆ. ಅಂಥ ಕಡೆ ಈ ತೊಂದರೆ ಇದ್ದೇ ಇರುತ್ತದೆ. ಆದರೆ ಇನ್ನು ಮುಂದೆ ಶೇಷಣ ಇಲ್ಲದೆ ಯಾರಿಗೂ ಮನ್ನಣೆ ಕೊಡಬಾರದೆಂಬುದನ್ನು ನಾವು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ.

REPORTS OF STATE VIGILANCE COMMISSION

47. SRI B. G. BANAKAR (Hirekerur).—

Will the Chief Minister be pleased to state—

(*a*) the total number of enquiries held and reports forwarded to Government by the State Vigilance Commission during the last three years;

(*b*) the total number of such cases in respect of which Government have passed final orders during the last three years;

(*c*) the details of punishment given to the Gazetted Officers and Non-Gazetted Officers during the last three years in respect of cases referred to in clause (*b*);

(*d*) the measures undertaken and proposed to be taken by the Government to make the State Vigilance Commission to work more effectively?

SRI N. HUTCHMASTHI GOWDA :—(Minister for Revenue (on behalf of SRI D. DEVARAJ URS : -Chief Minister)

(*a*) *Year*	*No. of D. Es. held*	*Reports sent to Govt. after completion of enquiry.*
1970-71	176	26
1171-72	265	43
1972-73	281	77